# ರಾಯಣ್ಣನ ವಿಜಯದಶಮಿ!



ಹಲವು ದಾಖಲೆಗಳ 'ಸಂಗೊಳ್ಳಿ ರಾಯಣ್ಣ' ದಸರಾ ಆಸುಪಾಸಿನಲ್ಲಿ ತೆರೆ ಕಾಣಲು ಸಿದ್ಧತೆ ನಡೆಸಿದೆ. ಅದ್ದೂರಿ ತಾರಾಗಣ, 175 ದಿನಗಳ ಚಿತ್ರೀಕರಣ, 30 ಕೋಟಿ ರೂಪಾಯಿ ಬಜೆಟ್! – ಇವು ರಾಯಣ್ಣ ಚಿತ್ರದ ಕೆಲವು ವಿಶೇಷಗಳು.

ಕಳೆದ ವಾರ ಸುದ್ದಿಗಾರರಿಗೆ ಎದುರಾಗಿದ್ದ 'ಸಂಗೊಳ್ಳಿ ರಾಯಣ್ಣ' ಚಿತ್ರತಂಡದ ಎಲ್ಲರ ಕಣ್ಣಲ್ಲೂ ಐತಿಹಾಸಿಕ ಮಹತ್ವದ ಚಿತ್ರವೊಂದರಲ್ಲಿ ಭಾಗಿಯಾಗಿರುವ ಬೆರಗಿತ್ತು. ಜೈಪುರದಲ್ಲಿ ಯೋಧನಾಗಿ ಹೊಡೆದಾಡಿದ ದೃಶ್ಯಗಳನ್ನು ದರ್ಶನ್ ನೆನಪಿಸಿಕೊಂಡರು. ನಾಯಕಿ ನಿಕಿತಾ ಕೂಡ, 'ಅದೊಂದು ಬ್ಯೂಟಿಫುಲ್ ಫೈಟ್' ಎಂದು ಪುಳಕಗೊಂಡರು.

ಚಿತ್ರದ ಬಜೆಟ್ ದೊಡ್ಡದಾದ ಕಾರಣ, ಮೊದಲ ಎರಡು ಮೂರು ವಾರಗಳಲ್ಲೇ ಆದಷ್ಟೂ ಹಣ ಗಳಿಸಲು ಚಿತ್ರತಂಡ ಉದ್ದೇಶಿಸಿದೆ. ತೆರೆಕಂಡ ಮೊದಲ ವಾರ ಟಿಕೆಟ್ ದರ ಹೆಚ್ಚಾಗಿರಲಿದೆ ಎನ್ನುವುದು ಸಿನಿಮಾದ ವಿತರಕ ಎಚ್.ಡಿ.ಗಂಗರಾಜು ನೀಡಿರುವ ಸುಳಿವು. ಕರ್ನಾಟಕದಲ್ಲಿ ಮಾತ್ರವಲ್ಲದೆ, ದೇಶದ ವಿವಿಧ ಭಾಗಗಳಲ್ಲಿ ಹಾಗೂ ವಿದೇಶಗಳಲ್ಲಿ ಕೂಡ ಏಕಕಾಲದಲ್ಲಿ ಚಿತ್ರವನ್ನು ತೆರೆ ಕಾಣಿಸುವುದಾಗಿ ನಿರ್ದೇಶಕ ಬಿ. ನಾಗಣ್ಣ ಹೇಳಿದ್ದಾರೆ.

ಚಿತ್ರದ ಬಜೆಟ್‌ನಷ್ಟೇ ತಾರಾಗಣವೂ ದೊಡ್ಡದು. ಕಿತ್ತೂರು ಚೆನ್ನಮ್ಮನಾಗಿ ಜಯಪ್ರದಾ ನಟಿಸಿದ್ದಾರೆ. ಶಶಿಕುಮಾರ್, ಶಿವಕುಮಾರ್, ಧರ್ಮ ಸೇರಿದಂತೆ ಹಲವು ತಾರೆಗಳು ರಾಜರ ಪೋಷಾಕು ತೊಟ್ಟು ಸಂಭ್ರಮಿಸಿದ್ದಾರೆ. ಮತ್ತೊಬ್ಬ ಜನಪ್ರಿಯ ನಾಯಕ ಸುದೀಪ್ ರಾಯಣ್ಣನ ಕಥೆಯ ನಿರೂಪಣೆಗೆ ಕಂಠದಾನ ಮಾಡಿದ್ದಾರೆ.

ಸದ್ಯಕ್ಕೆ ಚಿತ್ರದ ಟ್ರೇಲರ್ ಬಿಡುಗಡೆಯಾಗಿದೆ. ಸಿನಿಮಾ ಚಿತ್ರಮಂದಿರಗಳ ಹೊಸ್ತಿಲಲ್ಲೇ ಇದೆ. ಈ ವರ್ಷ ತಾರಾ ವರ್ಚಸ್ಸಿನ ಯಾವ ನಟನ ಚಿತ್ರವೂ ಆಹಾ ಎನ್ನುವ ಯಶಸ್ಸು ಕಂಡಿಲ್ಲ. ನಿರೀಕ್ಷೆ ಮೂಡಿಸಿದ್ದ 'ಅಣ್ಣಾ ಬಾಂಡ್', 'ಕಠಾರಿವೀರ ಸುರ ಸುಂದರಾಂಗಿ' ಚಿತ್ರಗಳು ಕಂಡದ್ದು ಸಣ್ಣ ಗೆಲುವಷ್ಟೇ. ಭಾರೀ ಪ್ರಚಾರದೊಂದಿಗೆ ಬಿಡುಗಡೆಯಾದ 'ಶಿವ' ಹಾಗೂ 'ಗಾಡ್ ಫಾದರ್' ಚಿತ್ರಗಳದ್ದು ದಾರುಣ ಸೋಲು. ಇಂಥ ಸಂದರ್ಭದಲ್ಲಿ ತೆರೆ ಕಾಣಲಿರುವ 'ಸಂಗೊಳ್ಳಿ ರಾಯಣ್ಣ' ನಿರೀಕ್ಷೆಗಳ ಜೊತೆಗೆ ಆತಂಕವನ್ನೂ ಹುಟ್ಟಿಸಿದ್ದಾನೆ. ಆದರೆ, ನಿರ್ಮಾಪಕ ಆನಂದ ಅಪ್ಪುಗೋಳ್ ಅವರದು ಮಾತ್ರ ನಿರ್ಲಿಪ್ತತೆಯ ಮಾತು– 'ರಾಯಣ್ಣನ ಮೇಲಿನ ಅಭಿಮಾನದಿಂದ ಮಾಡಿರುವ ಚಿತ್ರವಿದು. ಲಾಭ ನಷ್ಟದ ಬಗ್ಗೆ ನಾನು ತಲೆ ಕೆಡಿಸಿಕೊಳ್ಳುವುದಿಲ್ಲ'.

## 'ಅಭಿನವ ಕಣ್ಣಪ್ಪ'ನ ವೈಭವ

ಹೊಸ ಹುಡುಗ ವೈಭವ್ ನಾಯಕನಾಗಿರುವ 'ಸೀ ಯು' ತೆರೆಗೆ ಸಿದ್ಧವಾಗಿದೆ. ಸಿನಿಮಾ ಪ್ರಚಾರಕರ್ತ ರಾಮಕೃಷ್ಣ ಅವರ ಪುತ್ರ ವೈಭವ್‌ಗೆ ಅಪ್ಪನ ಕ್ಷೇತ್ರದಲ್ಲೇ ಭಿನ್ನ ಜಾಡು ತುಳಿಯುವ ಆಸೆ.

'ಸೀ ಯು' ನಾಗೇಂದ್ರರಾವ್ ನಿರ್ಮಾಣದ ಚಿತ್ರ. 'ಇದು ಆಧುನಿಕ ಕಣ್ಣಪ್ಪನ ಕಥೆ. ವರನಟ ರಾಜಕುಮಾರ್ ಅವರು ಪ್ರತಿಪಾದಿಸಿದ ನೇತ್ರದಾನದ ಮಹತ್ವವನ್ನು ಸಾರುವ ಚಿತ್ರ. ಇಂಥ ಸಾಮಾಜಿಕ ಕಳಕಳಿಯ ಚಿತ್ರ ಪ್ರೇಕ್ಷಕರಿಗೆ ಇಷ್ಟವಾಗಲಿದೆ' ಎನ್ನುವುದು ನಿರ್ಮಾಪಕರ ವಿಶ್ವಾಸ. ಸಾಮಾಜಿಕ ಕಾಳಜಿಯ ಜೊತೆಗೆ ಮನರಂಜನೆ ಹಾಗೂ ಕುತೂಹಲ ಕೆರಳಿಸುವ ಅಂಶಗಳೂ ಚಿತ್ರದಲ್ಲಿ ಸಾಕಷ್ಟಿವೆ ಎನ್ನುವುದು ನಿರ್ದೇಶಕ ದುರ್ಗಾ ಪ್ರಸಾದ್ ಅವರ ಬಣ್ಣನೆ.

ಚೊಚ್ಚಲ ಚಿತ್ರಕ್ಕಾಗಿ ವೈಭವ್ ಸಾಕಷ್ಟು ಬೆವರು ಸುರಿಸಿದ್ದಾರೆ. ಚಿತ್ರೀಕರಣ ಸಂದರ್ಭದಲ್ಲಿ ಎರಡು ಸಲ ಪ್ರಾಣಾಪಾಯಕ್ಕೆ ಒಳಗಾಗಿದ್ದರಂತೆ. ತಮ್ಮ ಕನವರಿಕೆ ಹಾಗೂ ಶ್ರಮ ಸಿನಿಮಾದಲ್ಲಿ ಮೂಡಿಬಂದಿದೆ ಎನ್ನುವ ಆತ್ಮವಿಶ್ವಾಸ ಅವರದ್ದು. ವೈಭವ್‌ಗೆ ಜೋಡಿಯಾಗಿ ಅಪರ್ಣಾ ಪ್ರಭು ನಟಿಸಿದ್ದಾರೆ. ಅವರಿಗೂ ಶೂಟಿಂಗ್ ಅನುಭವ ಒಂದು ರೋಚಕ ಪಯಣ ಅನ್ನಿಸಿದೆ. ಅಕ್ಟೋಬರ್ ತಿಂಗಳಲ್ಲೇ ಚಿತ್ರವನ್ನು ತೆರೆ ಕಾಣಿಸಲು 'ಸೀ ಯು' ತಂಡ ಪ್ರಯತ್ನಿಸುತ್ತಿದೆ.

★ ರಘು

